

# ರೋಸಿ ಕುಟ್ಟಿ

■ ಮೂಲ: **ಕಮಲಾದಾಸ್**
■ ಕನ್ನಡಕ್ಕೆ: **ಕೆ.ಕೆ. ಗಂಗಾಧರನ್**

‘ಕುನ್ನುಂಕುಳಂಗೆ ಹೋಗಿ ಬ್ರೈಡಲ್ ಮೇಕಪ್ ಮಾಡಿಸಬೇಕೂಂತ ರೋಸಿ ಕುಟ್ಟಿ ಹೇಳ್ತಿದ್ದಳು.’

ರೋಸಿ ಕುಟ್ಟಿಯ ತಾಯಿ ಅಂಜಿಕೆಯಿಂದ ಸ್ವಲ್ಪ ಧ್ವನಿ ತಗ್ಗಿಸಿ ಗಂಡನಿಗೆ ಹೇಳಿದಳು.

‘ಬ್ರೈಡಲ್ ಮೇಕಪ್ಪಾ? ಹಾಗಂದರೆ ಏನು...?’ ರೋಸಿ ಕುಟ್ಟಿಯ ಅಪ್ಪ ಕೇಳಿದರು.

ಅವರು ಆಗ ಚಪ್ಪರದ ಕಂಬಗಳನ್ನು ಬೆರಳಿನಿಂದ ಬಡಿದು ಪರಿಶೀಲಿಸುತ್ತಿದ್ದರು. ತೆಂಗಿನ ಕಂಬ ಒಳಗಿನಿಂದ ಶಿಥಿಲಗೊಂಡಿದ್ದರೆ, ಶಬ್ದ ಬೇರೊಂದು ರೀತಿಯಲ್ಲಾಗಿರುತ್ತದೆ. ಅದು ಅವರಿಗೆ ಗೊತ್ತಿತ್ತು. ರೋಸಿ ಕುಟ್ಟಿಯ ಮದುವೆಗೆ ಏಳು ಸಾವಿರ ರೂಪಾಯಿ ಖರ್ಚು ಮಾಡಿ ಚಪ್ಪರವನ್ನು ಸಿದ್ಧಗೊಳಿಸಲಾಗಿತ್ತು.

‘ಮುಖಕ್ಕೆಲ್ಲ ಬಿಳಿಯ ಬಣ್ಣ ಬಳಿಯೋದಂತೆ, ಕೆನ್ನೆಗೆ ಕೆಂಪು ಬಣ್ಣವನ್ನೂ ಹಚ್ತಾರಂತೆ. ಮುರಳೀಧರ ಮೆನನ್ನಿನ ಮಗಳ ಮದುವೆ ದಿನ ಇವೆಲ್ಲ ಮುಖಕ್ಕೆ ಹಚ್ಕೊಂಡಿದ್ದಳಂತೆ’ ಎಂದು ಅಮ್ಮ ಸಮಾಧಾನದಿಂದಲೇ ನುಡಿದರು.

‘ಬೆಳ್ಳಗಾಗಲಿಕ್ಕೆ ಹಚ್ಚಿದ್ದು ತೊನ್ನು ರೋಗಕ್ಕೆ ಕಾರಣವಾಯ್ತೂಂತ ಹಿಂದೊಬ್ಬರು ಹೇಳಿದ್ದರು. ಅಲ್ಲ, ರೋಸಿ ಕುಟ್ಟಿಯ ಬಣ್ಣಕ್ಕೆ ಈಗ ಏನಾಗಿದೇಂತ? ಅವಳೇನು ಬೆಳ್ಳಗಿಲ್ವಾ? ಎಷ್ಟೇ ಆದರೂ ಅವಳು ನಮ್ಮ ಮಗಳಲ್ವಾ? ನನ್ನ ಬಣ್ಣ ತಾನೆ ಅವಳಿಗೂ ಇರೋದು. ರಕ್ತ ಓಡಾಡುತ್ತಿರುವ ಬಣ್ಣ. ಇನ್ನು ಅದರ ಮೇಲೆ ಸುಣ್ಣಬಣ್ಣ ಏಕೆ ಬಳೀಬೇಕು. ಕೆಟ್ಟು ಹೋಗಲ್ವಾ...?’ ಅಪ್ಪ ಹೇಳಿದರು.

‘ಹೇಳಿದರೆ ಕೇಳಬೇಕಲ್ರಿ? ಬ್ರೈಡಲ್ ಮೇಕಪ್ ಮಾಡದೇ ಇದ್ದರೆ, ಚರ್ಚಿಗೆ ಬರೋದಿಲ್ವಂತೆ... ಅವಳಿಗೆ ಏನನಿಸುತ್ತೊ ಅದನ್ನೇ ಮಾಡುವವಳು ಆಕೆ’. ಅಮ್ಮ ಗೊಣಗಿಕೊಂಡರು.

‘ಬ್ರೈಡಲ್ ಮೇಕಪ್ ಏನಾದರೂ ಮಾಡಿಕೊಳ್ಳಲಿ. ಜನರ ಕೈಕಾಲು ಹಿಡಿದು ಈ ಮದುವೇನ ಮಾಡಿಸ್ತಿರೋದು ಗೊತ್ತಾ? ಮುಖಕ್ಕೆ ಸುಣ್ಣ ಬಣ್ಣ ಬಳೀಲಿಲ್ಲಾಂತ... ಅದಕ್ಕೆ ಅಪ್ಪ ಒಪ್ಪಲಿಲ್ಲಾಂತ... ಈ ಮದುವೆ ನಿಲ್ಲೋದು ಬೇಡ...’ – ರೋಸಿ ಕುಟ್ಟಿಯ ಅಪ್ಪ ಹೇಳಿದರು.

‘ಹಾಗಾದರೆ ಅದರ ಖರ್ಚು ಈಗ ಅವಳಿಗೆ ಕೊಟ್ಟುಬಿಡೋಣ್ವಂತೆ’ – ಅಮ್ಮ ಹೇಳಿದರು..

ಅಪ್ಪ ತನ್ನ ಶರ್ಟಿನ ಕಿಸೆಯಿಂದ ಮೂವತ್ತು ರೂಪಾಯಿಗಳನ್ನು ತೆಗೆದು ತಮ್ಮ ಹೆಂಡತಿಯತ್ತ ಚಾಚಿದರು.